ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



## ಹೆಣ್ಣುಮಕ್ಕಳ ರಕ್ಷಣೆಗಾಗಿ ಸರ್ಕಾರದಿಂದ ಹೊಸ ನೀತಿ : ಸಚಿವೆ ಉಮಾಶ್ರೀ

ವಿವರ : ಪುಟ 6



## ಮಂಗಳಗ್ರಹ ಕಕ್ಷೆಯಲ್ಲಿ 1000 ದಿನ ಪೂರೈಸಿದ ಮಂಗಳಯಾನ ನೌಕೆ

ವಿವರ : ಪುಟ 6

## ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿಯಾಗಿ ಬಿಹಾರದ ರಾಜ್ಯಪಾಲ, ದಲಿತ ನಾಯಕ ರಾಮನಾಥ್ ಕೋವಿಂದ್ ಆಯ್ಕೆ

ವಿವರ : ಪುಟ 10



₹55 Discount Per Gram
Gold 916 ₹ 2725/-
Silver ₹ 40100/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

### ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ವಿಧೇಯಕ ಜಾರಿ ವಿಚಾರ

# ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ:ಸಚಿವ

**ಬೆಂಗಳೂರು**

ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಸರ್ಕಾರ ವಿಧೇಯಕ ತರಲು ಮುಂದಾಗಿದ್ದು, ಇದರಿಂದ ಯಾವುದೇ ಕಾರಣಕ್ಕೂ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಮೇಶ್ ಕುಮಾರ್ ವಿಧಾನಪರಿಷತ್ತಿನಲ್ಲಿ ಸ್ಪಷ್ಟಪಡಿಸಿದರು.

ಕೋಟಾ ಶ್ರೀನಿವಾಸ್ ಪೂಜಾರಿ ಪ್ರಶ್ನೆಗೆ ಸಚಿವರು ಉತ್ತರಿಸುತ್ತಿದ್ದ ವೇಳೆ ಪ್ರತಿಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ ಮಧ್ಯಪ್ರವೇಶಿಸಿ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸುವ ವಿಧೇಯಕ ಬಗ್ಗೆ ಮುಕ್ತ ಚರ್ಚೆಗೆ ಅವಕಾಶ ಮಾಡಿ ಕೊಡಿ. ಇಲ್ಲವೆ ಮಸೂದೆಯನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಿ, ಸಾಧಕ-ಬಾಧಕಗಳ ಬಳಿಕ ಜಾರಿಗೆ ತನ್ನಿ ಎಂದು ಆಗ್ರಹಿಸಿದರು.

ಈಗಾಗಲೇ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸಿದ್ದು, ಅದನ್ನು ಅಂಗೀಕರಿಸಿದ ನಂತರ ವಿಧಾನ ಪರಿಷತ್‌ನಲ್ಲೂ ಮಂಡಿಸಿ ಸದನದ ಒಪ್ಪಿಗೆ ಪಡೆದು ವಿಧೇಯಕವನ್ನು ಜಾರಿ ಮಾಡಿಯೇ ತೀರುತ್ತೇವೆ. ಇದರಲ್ಲಿ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

**ಹೆಚ್ಚಿನ ರೋಗ ನಿರೋಧಕ ಮತ್ತು ಸ್ಟಿರಾಯಡ್ ಚುಚ್ಚುಮದ್ದುಗಳನ್ನು ಯಾರು ಹೆಚ್ಚು ಕೊಡುತ್ತಾರೋ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ರಮೇಶ್ ಕುಮಾರ್ ತಿಳಿಸಿದರು.**



ಅದಕ್ಕೆ ಉತ್ತರಿಸಿದ ಸಚಿವರು, ಜಂಟಿ ಸದನ ಸಮಿತಿಗೆ ಒಪ್ಪಿಸಿದರೆ ಆ ವಿಧೇಯಕ ವಿಳಂಬವಾಗುವುದು ಖಚಿತ, ಹೀಗಾಗಿ ಸದನದಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಲಾಗುವುದು. ನಿಮ್ಮ ಗೊಂದಲಗಳನ್ನು ಹೇಳಿ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಮುಂದಾಗಿರುವ ಸರ್ಕಾರದ ಕ್ರಮಗಳನ್ನು ವಿವರಿಸುತ್ತೇವೆ ಎಂದರು.

ಯಾವುದೇ ಪೂರ್ವಾಗ್ರಹ ಪೀಡಿತವಾಗಿ ಏಕಾ-ಏಕಿ ನಿರ್ಧಾರ ತೆಗೆದುಕೊಂಡಿಲ್ಲ, ಕಳೆದ 9 ತಿಂಗಳಿಂದ ನಿರಂತರವಾಗಿ ಚರ್ಚೆ ನಡೆಸಿ ಈ ಸಂಬಂಧ ಸಮಿತಿಯನ್ನೂ ರಚಿಸಿ ಜನ ಸಾಮಾನ್ಯರಿಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸುವ ಸಲುವಾಗಿ ಈ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸುವ ವಿಧೇಯಕವನ್ನು ತರಲಾಗುತ್ತಿದೆ ಎಂದರು.

ಈ ಮಧ್ಯಪ್ರವೇಶಿಸಿದ ಜೆಡಿಎಸ್ ಸದಸ್ಯ ರಮೇಶ್ ಬಾಬು, ವಿಧಾನ ಪರಿಷತ್‌ನಲ್ಲಿ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸುವ ವಿಧೇಯಕ ಮಂಡನೆಯಾಗುವುದಿಲ್ಲ ಎನ್ನುವ ಮಾತುಗಳು ಎಲ್ಲೆಡೆ ಕೇಳಿಬರುತ್ತಿವೆ. ಈ ಬಗ್ಗೆ ಸಚಿವರು ವಿಧೇಯಕವನ್ನು ಮಂಡಿಸುತ್ತೀರೊ ಇಲ್ಲವೊ ಎನ್ನುವುದನ್ನು ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ರಮೇಶ್ ಕುಮಾರ್, ವಿಧೇಯಕ ತರುವ ಕ್ರಮದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದರು.

**ಪಾರಂಪರಿಕ ವೈದ್ಯರು ನಕಲಿಯಲ್ಲ:** ರಾಜ್ಯದಲ್ಲಿರುವ ಪಾರಂಪರಿಕ ವೈದ್ಯರು ನಕಲಿ ಅಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಕೆ.ಆರ್. ರಮೇಶಕುಮಾರ್ ಮೇಲ್ಮನೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ಕಲಾಪದ ವೇಳೆ ಎಸ್.ವಿ. ಸಂಕನೂರು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪಾರಂಪರಿಕ »» 10ನೇ ಪುಟಕ್ಕೆ

## ಪಾಲಿಕೆ ಸದಸ್ಯರಿಗೆ ಮಾಸಿಕ ಉಚಿತ ಕರೆನ್ಸಿ ಸೌಲಭ್ಯ ಸ್ಥಗಿತ





**ತುಮಕೂರು**

ತುಮಕೂರು ಮಹಾನಗರ ಪಾಲಿಕೆಯ ಎಲ್ಲಾ 35 ಚುನಾಯಿತ ಸದಸ್ಯರುಗಳಿಗೆ ಪಾಲಿಕೆಯ ಆಡಳಿತವು ಒದಗಿಸಿದ್ದ ಉಚಿತ ಫೋನ್ ಸೌಲಭ್ಯವನ್ನು ಪಾಲಿಕೆ ಆಡಳಿತವು ಸ್ಥಗಿತಗೊಳಿಸಿದೆ.

ಕಳೆದ ಹಲವು ವರ್ಷಗಳಿಂದ ಪಾಲಿಕೆಯ ಸದಸ್ಯರುಗಳಿಗೆ ಪಾಲಿಕೆಯ ಆಡಳಿತವು ಬಿ.ಎಸ್.ಎನ್.ಎಲ್. ಮೊಬೈಲ್ ಸಿಮ್ ಕಾರ್ಡ್ ಅನ್ನು ವಿತರಿಸಿತ್ತು, ಪ್ರತಿ ತಿಂಗಳೂ ಪಾಲಿಕೆಯು 300 ರೂ. ಮೊತ್ತದಷ್ಟು ಕರೆನ್ಸಿಯನ್ನು ರೀಚಾರ್ಜ್ ಮಾಡಿಸುತ್ತಿತ್ತು, ಆದರೆ ಪೌರಾಡಳಿತ ನಿರ್ದೇಶನಾಲಯದ ಸೂಚನೆಯಂತೆ ಕಳೆದ ಒಂದು ತಿಂಗಳಿನಿಂದ ಈ ಸೌಲಭ್ಯವನ್ನು ಸ್ಥಗಿತಗೊಳಿಸಲಾಗಿದೆ.

ಪಾಲಿಕೆಯ ಸದಸ್ಯರುಗಳಿಗಷ್ಟೇ ಅಲ್ಲದೆ, ಪಾಲಿಕೆಯ ಎಲ್ಲ ಅಧಿಕಾರಿಗಳಿಗೂ, ಇಂಜಿನಿಯರ್‌ಗಳಿಗೂ, ನೀರು ಪೂರೈಕೆ ವಿಭಾಗದ ನಿರ್ದಿಷ್ಟ ಸಿಬ್ಬಂದಿಗೂ, ಬಿ.ಎಸ್.ಎನ್.ಎಲ್. ಸಿಮ್‌ಕಾರ್ಡ್ ನೀಡಲಾಗಿತ್ತು, ಆಡಳಿತಾತ್ಮಕವಾಗಿ ಜನಪ್ರತಿನಿಧಿಗಳು ಮತ್ತು ಅಧಿಕಾರಿ / ಸಿಬ್ಬಂದಿ ನಡುವೆ ಸಂಪರ್ಕ ಸುಲಭವಾಗುವುದೆಂಬ ಕಾರಣಕ್ಕಾಗಿ ಈ ಸೌಲಭ್ಯ ಜಾರಿಯಲ್ಲಿತ್ತು. ಆದರೆ ಇದರಿಂದ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕವಾಗಿ ಹೊರೆ ಆಗುವುದೆಂಬ ಕಾರಣಕ್ಕೆ ರಾಜ್ಯಾದ್ಯಂತ ಅನ್ವಯವಾಗುವಂತೆ ಸೂಚನೆ ನೀಡಲಾದ ಹಿನ್ನೆಲೆಯಲ್ಲಿ ತುಮಕೂರು ಪಾಲಿಕೆಯ ಆಡಳಿತವು ಈ ರೀತಿ ಕ್ರಮ ಕೈಗೊಂಡಿದೆ ಎಂದು ತಿಳಿದು ಬಂದಿದೆ. ''ಸರ್ ನಮಗೆ ನೀಡುವ ಗೌರವಧನ ಕೇವಲ ಆರು ಸಾವಿರ ರೂ. ಮಾತ್ರ. ಪಾಲಿಕೆ ಆಡಳಿತವು 300 ರೂ. ಮೊತ್ತದ ಕರೆನ್ಸಿ ಹಾಕಿಸುತ್ತಿತ್ತು. ಅದೊಂದಾದರೂ ಅನುಕೂಲ ನಮಗಿತ್ತು. ಈಗ ಅದೂ ಸಹ ಇಲ್ಲದಂತಾಗಿದೆ ಎಂದು ಹೆಸರು ಹೇಳಲಿಚ್ಚಿಸದ ಸದಸ್ಯರೊಬ್ಬರು ಉದ್ಗರಿಸಿದರು.

## ಎಲ್ಲ ರೈತರಿಗೂ ಮಣ್ಣು ಆರೋಗ್ಯ ಚೀಟಿ

**ಬೆಂಗಳೂರು**

ವರ್ಷಾಂತ್ಯದೊಳಗೆ ಎಲ್ಲ ರೈತರಿಗೂ ಮಣ್ಣು ಆರೋಗ್ಯ ಚೀಟಿ ನೀಡ ಲಾಗುವುದು ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಕೃಷಿ ಇಲಾಖೆ ಬೇಡಿಕೆ ಮೇಲಿನ ಚರ್ಚೆಗೆ ಉತ್ತರಿಸಿದ ಸಚಿವರು, 17 ಲಕ್ಷ ಮಾದರಿ ಸಂಗ್ರಹಿಸಲಾಗಿದೆ. ಈ ಯೋಜನೆಯನ್ನು ನಾವು ಘೋಷಣೆ ಮಾಡಿದ ನಂತರ ಕೇಂದ್ರ ಸರಕಾರವೂ ಮಾಡಿದ್ದು ಅಗತ್ಯ ಸಹಕಾರ ನೀಡುತ್ತಿದೆ ಎಂದು ವಿವರಿಸಿದರು.

ಮಣ್ಣು ಮಾದರಿ ಸಂಗ್ರಹಿಸಿ ಯಾವ ಬೆಳೆಗೆ ಯಾವ ಗೊಬ್ಬರ ನೀಡಬೇಕು ಎಂಬುದನ್ನು ತಿಳಿಸಿಕೊಡಲಾಗುವುದು. ಇದರಲ್ಲಿ ನಾವು ದೇಶದಲ್ಲೇ ಎರಡನೇ ಸ್ಥಾನದಲ್ಲಿದ್ದೇವೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯಡಿ ರೈತ ಉತ್ಪಾದಕ ಸಂಘಗಳನ್ನು ಸ್ಥಾಪಿಸಿ ಲಾಭ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗಿದೆ. ರೈತರಿಗೆ 9 ಸಾವಿರ ಕೋಟಿ ರೂ. ಮೊತ್ತದ ವಿದ್ಯುತ್ ಉಚಿತವಾಗಿ ನೀಡಲಾಗುತ್ತಿದೆ. ಕೃಷಿ ಯಾಂತ್ರೀಕರಣಕ್ಕೆ ಆದ್ಯತೆ ನೀಡಿ 456 ಕೋಟಿ ರೂ. ಅನುದಾನ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ 18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜೋಳ, ರಾಗಿ ಬೆಳೆಯಲಾಗುತ್ತಿದೆ. ಪ್ರದೇಶ ಹೆಚ್ಚಳಕ್ಕೆ ಆದ್ಯತೆ ನೀಡಲಾಗುತ್ತಿದೆ. ಜೋಳ ಮಂಡಳಿ ಸ್ಥಾಪಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಉತ್ತರಿಸಿದರು.

ರಾಗಿ ಮತ್ತು ಜೋಳಕ್ಕೆ ಕನಿಷ್ಠ ಬೆಂಬಲ ಬೆಲೆಗಿಂತ ಕ್ವಿಂಟಾಲ್‌ಗೆ 400 ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಸಾವಯವ ಕೃಷಿ ಮತ್ತು ಸಿರಿಧಾನ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ. ಅಂತಾರಾಷ್ಟ್ರೀಯ ಮಟ್ಟದ ಮೇಳ ಆಯೋಜಿಸಿದ್ದೇವೆ ಎಂದು ಹೇಳಿದರು.

## ರಂಗಾಯಣಕ್ಕೆ ನಿರ್ದೇಶಕರ ನೇಮಕ

**ಬೆಂಗಳೂರು**

ರಾಜ್ಯದಲ್ಲಿರುವ 4 ರಂಗಾಯಣಗಳ ಪೈಕಿ ಮೈಸೂರು, ಶಿವಮೊಗ್ಗ, ಕಲ್ಬುರ್ಗಿ ರಂಗಾಯಣಗಳಿಗೆ ನಿರ್ದೇಶಕರನ್ನು ಇತ್ತೀಚೆಗಷ್ಟೆ ನೇಮಕ ಮಾಡಲಾಗಿದೆ ಎಂದು ಸಚಿವೆ ಉಮಾಶ್ರೀ ಹೇಳಿದರು.

ಎಚ್.ಎಂ. ರೇವಣ್ಣ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ ಒಂದು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇದ್ದವು. ಆದರೆ, ರಂಗಾಯಣದ ಕಾರ್ಯಚಟುವಟಿಕೆಗೆ ತೊಂದರೆಯಾಗದಂತೆ ಇಲಾಖೆಯ ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಇತ್ತೀಚೆಗಷ್ಟೆ ಮೈಸೂರು ರಂಗಾಯಣಕ್ಕೆ ಭಾಗೀರಥಿ ಬಾಯಿ ಕದಂ, ಶಿವಮೊಗ್ಗ ರಂಗಾಯಣಕ್ಕೆ ಡಾ. ಎಂ. ಗಣೇಶ್, ಕಲ್ಬುರ್ಗಿ ರಂಗಾಯಣಕ್ಕೆ ಮಹೇಶ್ ವಿ. ಪಾಟೀಲ್ ಅವರನ್ನು ನೇಮಕ ಮಾಡಲಾಗಿದೆ ಎಂದರು.

ರಂಗಾಯಣದ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಂಗ ಸಮಾಜ ಅಸ್ತಿತ್ವಕ್ಕೆ ತರಲಾಗಿದ್ದು, ಅದು ಕಾಲ ಕಾಲಕ್ಕೆ ಸಭೆ ನಡೆಸಿ ರಂಗಾಯಣದಲ್ಲಿ ಏನು ಆಗಬೇಕು ಎನ್ನುವ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ ಎಂದರು.

ರಾಜ್ಯದಲ್ಲಿ ಖಾಲಿ ಇರುವ ರಂಗಾಯಣಗಳ ನಿರ್ದೇಶಕರ ನೇಮಕ ಸಂಬಂಧ ಆಡಳಿತ ಪಕ್ಷದ ಸದಸ್ಯ ಎಚ್.ಎಂ. ರೇವಣ್ಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಉಮಾಶ್ರೀ ನಡುವೆ ಮಾತಿನ ಚಕಮಕಿ, ಜಟಾಪಟಿಗೂ ವಿಧಾನ ಪರಿಷತ್‌ನಲ್ಲಿ ವೇದಿಕೆಯಾಯಿತು.

ಒಂದು ವರ್ಷದಿಂದ ರಂಗಾಯಣದಲ್ಲಿ ನಿರ್ದೇಶಕರಿಲ್ಲದೆ ಖಾಲಿ ಇವೆ. ಹೀಗಿರುವಾಗ ರಂಗಾಯಣಗಳ ಅಗತ್ಯವೇನಿದೆ ಎಂದು ಎಚ್.ಎಂ. ರೇವಣ್ಣ ಪ್ರಶ್ನಿಸಿದ್ದು ಉಮಾಶ್ರೀ ಅವರಿಗೆ ಕೋಪ ತರಿಸಿತು. ಇದರಿಂದಾಗಿ ಇದಕ್ಕೆ ಪ್ರತಿಕ್ರಿಯಿಸಿದ ಅವರು, ನಾವೇನೂ ಸುಮ್ಮನೆ ಕುಳಿತಿಲ್ಲ, ಕಳೆದ ಒಂದು ವರ್ಷಗಳಿಂದ ನಿರಂತರವಾಗಿ ಸಭೆ ನಡೆಸಿ ಅರ್ಹರನ್ನು ನೇಮಕ ಮಾಡಿದ್ದೇವೆ ಎಂದರು.

ಆಗ ಎಚ್.ಎಂ. ರೇವಣ್ಣ, ಸಚಿವರು ನೀಡಿರುವ ಉತ್ತರದಲ್ಲಿ ಹೊಸ ನಿರ್ದೇಶಕರನ್ನು ಪ್ರಸ್ತಾಪಿಸಿಲ್ಲ, ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಇದಕ್ಕೆ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಆಗ ಉಮಾಶ್ರೀ ತಪ್ಪು ಉತ್ತರ ನೀಡುವ ಉದ್ದೇಶ ತಮಗಿಲ್ಲ, ಸದನದಲ್ಲೇ ಉತ್ತರ ನೀಡುವ ಸಲುವಾಗಿ ಈ ರೀತಿಯ ಉತ್ತರ ನೀಡಿದ್ದೇನೆ ಎಂದು ಹೇಳಿದರು.

# ಸಹಕಾರ ತತ್ವಗಳನ್ನು ಪ್ರಾಮಾಣಿಕವಾಗಿ ಪಾಲಿಸಿ

## ಬುಕ್ಕಾಪಟ್ಟಣದಲ್ಲಿ ಕನಕ ಪತ್ತಿನ ಸಹಕಾರ ಸಂಘ ಶಾಖೆ ಉದ್ಘಾಟಿಸಿ ಶ್ರೀಗಳ ನುಡಿ

**ಶಿರಾ**

ಪ್ರತಿಯೊಂದು ಸಹಕಾರ ಸಂಘಗಳು ಸಹಕಾರ ತತ್ವಗಳನ್ನು ಪ್ರಾಮಾಣಿಕವಾಗಿ ಪಾಲಿಸಿದಾಗ ಮಾತ್ರ ಅಂತಹ ಸಂಘಗಳು ಬೆಳವಣಿಗೆ ಕಾಣಲು ಸಾದ್ಯವಾಗಿದ್ದು ಯಾವುದೇ ಸಹಕಾರ ಸಂಘದ ಅಭಿವೃದ್ಧಿಗೆ ಪೂರಕವಾಗಿ ಆ ಸಂಘದ ಸದಸ್ಯರಲ್ಲಿನ ಹೊಂದಾಣಿಕಾ ಮನೋಭಾವಗಳು ಸಂಘದ ಶ್ರೇಯೋಭಿವೃದ್ಧಿಗೆ ಕಾರಣವಾಗುತ್ತವೆ ಎಂದು ಕಾಗಿನೆಲೆ ಮಹಾ ಸಂಸ್ಥಾನ ಮಠದ ಹೊಸದುರ್ಗಾ ಶಾಖಾ ಮಠದ ಪೀಠಾಧ್ಯಕ್ಷರಾದ ಶ್ರೀ ಈಶ್ವರಾನಂದಪುರಿಸ್ವಾಮೀಜಿ ತಿಳಿಸಿದರು.

**ಸಹಕಾರ ಸಂಘಗಳು ಕೇವಲ ತನ್ನ ಆರ್ಥಿಕ ಸದೃಢತೆಗಷ್ಟೇ ಗಮನ ನೀಡದೆ ಸಂಘದ ಸದಸ್ಯರ ಹಾಗೂ ಅವರ ಕುಟುಂಬದ ಬಗ್ಗೆ ಕಾಳಜಿ ವಹಿಸಬೇಕು. ಸಂಘದ ಸದಸ್ಯರ ಕುಟುಂಬದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸುವುದು, ಸದಸ್ಯರ ಆರೋಗ್ಯ ಸಂರಕ್ಷಣೆಗೆ ಯಸಶ್ವಿನಿ ಯೋಜನೆ, ಆರೋಗ್ಯ ಶಿಬಿರಗಳನ್ನು ಆಯೋಜಿಸುವಂತಹ ಕೆಲಸಗಳನ್ನು ಕೈಗೊಳ್ಳಬೇಕು ಅಂತಹ ಕೆಲಸಗಳನ್ನು ಕನಕಪತ್ತಿನ ಸಹಕಾರ ಸಂಘ ಮಾಡುತ್ತಿದೆ.**

**-ಶ್ರೀ ಈಶ್ವರಾನಂದಪುರಿಸ್ವಾಮೀಜಿ**



ತಾಲ್ಲೂಕಿನ ಬುಕ್ಕಾಪಟ್ಟಣ ಗ್ರಾಮದಲ್ಲಿ ಶಿರಾ ತಾ|| ಶ್ರೀ ಕನಕಪತ್ತಿನ ಸಹಕಾರ ಸಂಘದ 7ನೇ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಶಿರಾ ತಾ|| ಶ್ರೀ ಕನಕ ಪತ್ತಿನ ಸಹಕಾರ ಸಂಘಗಳು ಕೇವಲ ಅತ್ಯಂತ ಕಡಿಮೆ ಅವಧಿಯಲ್ಲಿಯೇ 7 ಸಾಖೆಗಳನ್ನು ಹೊಂದಿರುವುದು ಹೆಮ್ಮೆಯ ಸಂಗತಿಯಾಗಿದ್ದು ಇಂತಹ ಪ್ರಗತಿಪರ ಕೆಲಸಕ್ಕೆ ಈ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ದಿ||ಎಸ್.ಕೆ.ದಾಸಪ್ಪ ಅವರ ಪರಿಶ್ರಮವೇ ಕಾರಣ. ಅವರ ಪರಿಶ್ರಮದ ಜೊತೆಗೆ ಈ ಸಂಘದ ನಿರ್ದೇಶಕರ ಸಹಕಾರ, ಪ್ರೋತ್ಸಾಹಗಳು ಸಂಘವು ಗಟ್ಟಿಮುಟ್ಟಾಗಿ ಬೆಳೆದು ಉತ್ತಮ ಹೆಸರನ್ನು ಸಂಪಾದಿಸಲು ಕಾರಣವಾಗಿದೆ ಎಂದರು.

ಸಹಕಾರ ಸಂಘಗಳನ್ನು ಹುಟ್ಟು ಹಾಕಿದ ಗದಗ್‌ನ ಸಿದ್ದನಗೌಡ ಸಣ್ಣ ರಾಮನ ಗೌಡರಂತಹ ಮಹಾತ್ಮರ ಸ್ಮರಣೆ ಮಾಡುವುದು ಎಲ್ಲರ ಕರ್ತವ್ಯವಾಗಬೇಕು. ಸಹಕಾರ ಸಂಘಗಳನ್ನು ಕಟ್ಟಿ ಬೆಳೆಸುವುದೆಂದರೆ ಅದು ತಮಾಷೆಯ ಮಾತಲ್ಲ, ಇಡೀ ಸಮಾಜದ ಹಿತ ದೃಷ್ಟಿಯನ್ನಿಟ್ಟುಕೊಂಡು ಸಂಘಗಳನ್ನು ನಡೆಸಬೇಕಾಗುತ್ತದೆ ಎಂದರು.

ಈಗ 7 ಶಾಖೆಗಳನ್ನು ಹೊಂದಿರುವ ಶಿರಾ ತಾ||ಕನಕಪತ್ತಿನ ಸಹಕಾರ ಸಂಘ ಇಡೀ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತನ್ನ ಶಾಖೆಗಳನ್ನು ಹೊಂದುವಂತಾಗಬೇಕು. ಹೆಚ್ಚು ಹೆಚ್ಚು ಸಂಘಗಳ ಸ್ಥಾಪನೆಯಿಂದ ಉದ್ಯೋಗ ಸೃಷ್ಟಿಯ ಜೊತೆಗೆ ಸಮಾಜದ ಏಳ್ಗೆಯೂ ಸಾಧ್ಯವಾಗುತ್ತದೆ. ಅತ್ಯಂತ ಸಣ್ಣ ಜನಾಂಗಕ್ಕೂ ಆರ್ಥಿಕ ಸಾಲ, ಸೌಲಭ್ಯಗಳನ್ನು ನೀಡಿ ಅವರನ್ನು ಸದೃಢಗೊಳಿಸುವ ಕೆಲಸಗಳಾಗಬೇಕು ಎಂದರು.

ಸಹಕಾರ ಸಂಘಗಳು ಕೇವಲ ತನ್ನ ಆರ್ಥಿಕ ಸದೃಢತೆಗಷ್ಟೇ ಗಮನ ನೀಡದೆ ಸಂಘದ ಸದಸ್ಯರ ಹಾಗೂ ಅವರ ಕುಟುಂಬದ ಬಗ್ಗೆ ಕಾಳಜಿ ವಹಿಸಬೇಕು. ಸಂಘದ ಸದಸ್ಯರ ಕುಟುಂಬದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸುವುದು, ಸದಸ್ಯರ ಆರೋಗ್ಯ ಸಂರಕ್ಷಣೆಗೆ ಯಸಶ್ವಿನಿ ಯೋಜನೆ, ಆರೋಗ್ಯ ಶಿಬಿರಗಳನ್ನು ಆಯೋಜಿಸುವಂತಹ ಕೆಲಸಗಳನ್ನು ಕೈಗೊಳ್ಳಬೇಕು ಅಂತಹ ಕೆಲಸಗಳನ್ನು ಕನಕಪತ್ತಿನ ಸಹಕಾರ ಸಂಘ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಜಿ.ಪಂ. ಸದಸ್ಯ ಜಯ ಪ್ರಕಾಶ್, ಬುಕ್ಕಾಪಟ್ಟಣ ಗ್ರಾ.ಪಂ. ಅಧ್ಯಕ್ಷ ಪಾಂಡು ರಂಗಪ್ಪ, ರಾಮಲಿಂಗಾಪುರ ಗ್ರಾ.ಪಂ. ಅಧ್ಯಕ್ಷೆ ಶೋಭಾ, ತಾ.ಪಂ. »» 6ನೇ ಪುಟಕ್ಕೆ

# ಆರ್.ಟಿ.ಜಿ.ಎಸ್.ಪಾವತಿಗೆ ಅಡ್ಡಿಯಾದ ಬಾರ್‌ಕೋಡ್

## ಹಣಕ್ಕಾಗಿ ಪರಿತಪಿಸುತ್ತಿರುವ ವಿವಿಧ ವಸತಿ ಯೋಜನೆಯ ಫಲಾನುಭವಿಗಳು

♦ **ರಂಗಧಾಮಯ್ಯ**
**ಕೊರಟಗೆರೆ**

ಸರ್ಕಾರದಿಂದ ನೀಡುವ ಆಶ್ರಯ, ಅಂಬೇಡ್ಕರ್, ಇಂದಿರಾ, ಬಸವ, ವಾಜಪೇಯಿ ಸೇರಿದಂತೆ ಇನ್ನಿತರ ಮನೆಗಳಿಗೆ ಫಲಾನುಭವಿಗಳ ಆಧಾರ್ ಬಾರ್ ಕೋಡ್ ಸಮಸ್ಯೆಯಿಂದ ಕಳೆದ 1 ತಿಂಗಳುಗಳಿಂದ ಮನೆಗಳು ಆರ್.ಟಿ.ಜಿ.ಎಸ್ ಆಗದೆ ಫಲಾನುಭವಿಗಳು ಹಣಕ್ಕಾಗಿ ಪರಿತಪಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯ ಸರ್ಕಾರ ಗುಡಿಸಲು ಮುಕ್ತ ರಾಜ್ಯವನ್ನಾಗಿಸುವ ಗುರಿಯೊಂದಿಗೆ ಇಂದಿರಾ, ಅಂಬೇಡ್ಕರ್, ಬಸವ, ಆಶ್ರಯ, ವಿಶೇಷ ಅಭಿವೃದ್ಧಿ ಯೋಜನೆ, ಪ್ರಧಾನಮಂತ್ರಿ ಆವಾಜ್, ವಾಜಪೇಯಿ ನಗರ ವಸತಿ ಸೇರಿದಂತೆ ಇನ್ನಿತರ ಹೆಸರಿನಲ್ಲಿ ಬಡತನ ರೇಖೆಗಿಂತ ಕೆಳವರ್ಗದ ಜನರಿಗೆ ಮನೆ ನೀಡುತ್ತಿದ್ದು, ಸರ್ಕಾರ ಮಹತ್ವಾಕಾಂಕ್ಷೆಗೆ ರಾಜ್ಯಮಟ್ಟದ ಅಧಿಕಾರಿಗಳ ಕೆಲವೊಂದು ಅವೈಜ್ಞಾನಿಕ ಆದೇಶಗಳಿಂದ ಮನೆ ನಿರ್ಮಿಸಿಕೊಳ್ಳುತ್ತಿರುವ ಫಲಾನುಭವಿಗಳಿಗೆ ಖಾತೆಗೆ ಹಣ ಜಮಾ ಆಗದೆ, ಹಣಕ್ಕಾಗಿ ಗ್ರಾ.ಪಂ.ಗೆ ಅಲೆದಾಡಿ ಸರ್ಕಾರದ ವಿರುದ್ಧ ಹಿಡಿಶಾಪ ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಹಿಂದೆ ಪ್ರತಿ ಗ್ರಾ.ಪಂ.ಗಳಲ್ಲಿಯೂ 1.4 ಹಾಗೂ 1.5 ವರ್ಷನ್‌ನಲ್ಲಿ ಫಲಾಭವಿಗಳ ಮನೆಯ ಮುಂದೆ ಗ್ರಾ.ಪಂ.ನ ಪಿಡಿಒಗಳು ಫಲಾನುಭವಿಯ ಜೊತೆ ಫೋಟೊ ತೆಗೆದು ಆ ಫೋಟೋವನ್ನು ತಮ್ಮ ಪಂಚಾಯ್ತಿಯ ಮನೆಗಳಿಗೆ ಸಂಬಂಧಿಸಿದಂತೆ ಆಪ್‌ನಲ್ಲಿ ಅಪ್‌ಲೋಡ್ ಮಾಡಿ ಫಲಾನುಭವಿಗಳ ಖಾತೆಗೆ ನೇರ ಹಣ ಜಮಾ ಆಗುವಂತಹ ಪದ್ಧತಿ ಇತ್ತು. ಆದರೆ ಈಗ 1.4 ಹಾಗೂ 1.5 ಬದಲು 1.6 ವರ್ಷನ್‌ನಲ್ಲಿ ಗ್ರಾ.ಪಂ.ನ ಪಿಡಿಒ ಫಲಾಭವಿಯ ಮನೆಯ ಮುಂದೆ ಅವರ ಆಧಾರ್‌ನಲ್ಲಿ ಹೆಬ್ಬೆಟ್ಟಿನ ಗುರುತಿರುವ ತಮ್ಮ ಆಧಾರ್ ಕೋಡ್ ನಮೂದಿಸಿ ಫಲಾನುಭವಿಯ ಮನೆಯ ಮುಂಭಾಗದಲ್ಲಿಯೇ ನಿಂತು ಆನ್‌ಲೈನ್ ಮೂಲಕ ಆರ್.ಟಿ.ಜಿ.ಎಸ್ ಮಾಡಬೇಕು ಎಂದು ಕಾನೂನು ಹೊರಡಿಸಿರುವುದರಿಂದ ಈ ಅವೈಜ್ಞಾನಿಕ ಕಾನೂನಿನಿಂದ ಹೆಬ್ಬೆಟ್ಟಿನ ಗುರುತಿನ ಬದಲು ಬಾರ್ ಕೋಡ್ ಲೈನ್ ಇರುವ ಫಲಾನುಭವಿಗಳ ಮನೆಯ ಜಿ.ಪಿ.ಎಸ್ ಆಗದೆ ಮನೆಯ ಫಲಾನುಭವಿಗಳಿಗೂ ಹಾಗೂ ಸಂಬಂಧಪಟ್ಟ ಗ್ರಾ.ಪಂ ಪಿ.ಡಿ.ಒ. ಗಳಿಗೂ ದೊಡ್ಡ ತಲೆ ನೋವಾಗಿದ್ದು, ದಿನಕ್ಕೊಂದು ಕಾನೂನಿನಿಂದ ಬಡ ಜನತೆ ಅಲೆಯುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸುತಿದ್ದಾರೆ.





### ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕರ ಆದೇಶ

**ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರಾಜೀವ್ ಗಾಂಧಿ ವಸತಿ ಗ್ರಾಮೀಣ ವಸತಿ ನಿಗಮ ವ್ಯವಸ್ಥಾಪಕ ನಿರ್ದೇಶಕ ಮೋನಿಷ್‌ಮೊದ್ಗಿಲ್, ಜಿಲ್ಲಾಧಿಕಾರಿ ಮೋಹನ್ ರಾಜ್, ಜಿಲ್ಲಾ ಪಂಚಾಯ್ತಿ ಸಿಇಒ ಶಾಂತಾರಾಮ್, ಜಿಲ್ಲೆಯ ಎಲ್ಲಾ ತಾ.ಪಂ.ನ ಕಾರ್ಯನಿರ್ವಹಣಾಧಿಕಾರಿಗಳು, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ, ವಸತಿ ಯೋಜನೆಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳೊಂದಿಗೂ ಚರ್ಚೆ ನಡೆಸಿ ಆಧಾರ್ ಕಾರ್ಡ್ ಸಮಸ್ಯೆಯನ್ನ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಅಧಿಕಾರಿಗಳು ಖುದ್ದು ಭೇಟಿ ನೀಡಿ ಫಲಾನುಭವಿಗಳಿಗೆ ಆಧಾರ್ ಕಾರ್ಡ್ ಬಾರ್ ಕೋಡ್ ಬದಲಾಯಿಸಿಕೊಳ್ಳಲು ಅರಿವು ಮೂಡಿಸುವಂತಹ ಕೆಲಸವಾಗಬೇಕು. ಅತೀ ಶೀಘ್ರವಾಗಿ ಎಲ್ಲಾ ಯೋಜನೆಗಳಿಗೂ ಫಲಾನುಭವಿಗಳಿಗೆ ತ್ವರಿತವಾಗಿ ಅವರ ಖಾತೆಗೆ ಹಣ ಜಮಾವಣೆಯಾಗುವಂತಾಗಬೇಕು ಎಂದು ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು.**

ಈ ಸಮಸ್ಯೆ ಪ್ರಾರಂಭಗೊಂಡು 1 ತಿಂಗಳು ಕಳೆದಿದ್ದು, ಆಶ್ರಯ , ಅಂಬೇಡ್ಕರ್, ಇಂದಿರಾ, ಬಸವ, ವಿಶೇಷ ಅಭಿವೃದ್ಧಿ ಯೋಜನೆ, ಪ್ರಧಾನಮಂತ್ರಿ ಆವಾಜ್ ಹಾಗೂ ವಾಜಪೇಯಿ ನಗರ ವಸತಿ, ಯೋಜನೆಗಳು ಸೇರಿದಂತೆ ಇನ್ನಿತರ ಮನೆಗಳ ಫಲಾನುಭವಿಗಳ ಕಳೆದ 8-10 ತಿಂಗಳುಗಳಿಂದ ಕೆಲಸ ಕಾರ್ಯ ಮಾಡಿ ಆರ್.ಟಿ.ಜಿ.ಎಸ್ ಮಾಡಿಸಿ ಬಿಲ್ ಪಾವತಿ ಮಾಡಿಸಿಕೊಳ್ಳಲು ಕಾಯುತ್ತಿದ್ದು, ಸಂದರ್ಭದಲ್ಲಿ ಈ ಗ್ರಾ.ಪಂ ಪಿಡಿಒಗಳು ಮನೆಯ ಬಳಿ ಬಂದು ಆರ್.ಟಿ.ಜಿ.ಎಸ್ ಮಾಡಲು ಪ್ರಯತ್ನಿಸುವಾಗ ಹೆಬ್ಬೆಟ್ಟಿನ ಗುರುತಿರುವ ಆಧಾರ್ ಕಾರ್ಡ್‌ಗಳು ಮಾತ್ರ ಅಪ್‌ಲೋಡ್ ಆಗುತ್ತಿದೆ. ಬಾರ್‌ಲೈನ್ ಇರುವ ಆಧಾರ್ ಕಾರ್ಡ್‌ನ ಸಮಸ್ಯೆ ಇದೆ ಎಂದು ಹೇಳಿ ವಾಪಸ್ಸಾಗುತ್ತಿರುವುದು ಬಡ ಅಸಹಾಯಕ ಫಲಾನುಭವಿಗಳಿಗೆ ದಿಕ್ಕು ಕಾಣದಂತಾಗಿದ್ದು, ಸರ್ಕಾರದ ಅವೈ ಜ್ಞಾನಿಕ ಕೆಲವೊಂದು ಕಾನೂನುಗಳಿಂದ ಅಮಾಯಕ ಗ್ರಾಮ ಪ್ರದೇಶದ ಜನರಿಗೆ »» 6ನೇ ಪುಟಕ್ಕೆ

## ಇಂದು ಯೋಗ ನಡಿಗೆ:ನಾಳೆ ಯೋಗ ದಿನಾಚರಣೆ

**ತುಮಕೂರು**

ಮೂರನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ತುಮಕೂರು ನಗರದಲ್ಲಿ ಜೂನ್ 20 ರಂದು ''ಯೋಗ ನಡಿಗೆ ಕಾರ್ಯಕ್ರಮ ಹಾಗೂ ಜೂನ್ 21 ರಂದು ''ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಡೆಯಲಿದೆ.

ಅಂದು ಸಂಜೆ 4 ಗಂಟೆಗೆ ಯೋಗ ನಡಿಗೆ ಕಾರ್ಯ ಕ್ರಮ ತುಮಕೂರು ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಆರಂಭವಾಗಲಿದೆ, ಅಲ್ಲಿಂದ ಹೊರಟು ಬಿ.ಎಚ್. ರಸ್ತೆ ಮೂಲಕ ಮಹಾತ್ಮಗಾಂಧಿ ಕ್ರೀಡಾಂಗಣ ತಲುಪಿ ಮುಕ್ತಾಯ ಆಗಲಿದೆ. ಸುಮಾರು 500 ಜನರು ಭಾಗವಹಿಸುವ ನಿರೀಕ್ಷೆ ಇದೆ. ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಸಂಬಂಧ ಜನಜಾಗೃತಿ ಮೂಡಿಸುವ ಸಲುವಾಗಿ ಈ ಕಾರ್ಯಕ್ರಮ ಏರ್ಪಟ್ಟಿದೆ.

ಜೂ. 21 ರಂದು ಬೆಳಗ್ಗೆ 7 ರಿಂದ 8 ಗಂಟೆಯವರೆಗೆ ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ''3ನೇ ಅಂತರ ರಾಷ್ಟ್ರೀಯ ಯೋಗ ದಿನ ಆಚರಣೆಗೊಳ್ಳಲಿದೆ. ಎನ್.ಸಿ.ಸಿ. ಯ ಸುಮಾರು 800 ಕೆಡೆಟ್‌ಗಳು ಸೇರಿದಂತೆ ಸುಮಾರು ಒಂದು ಸಾವಿರ ಜನರು ಈ ಸಂದರ್ಭದಲ್ಲಿ ಸಾಮೂಹಿಕ ಯೋಗಾಸನ ಮಾಡಲಿ ರುವರು, ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಗೃಹ ಸಚಿವ ಡಾ|| ಜಿ.ಪರಮೇಶ್ವರ ಅವರ ಉಪಸ್ಥಿತಿಯಲ್ಲಿ, ಡಾ|| ಎಸ್.ರಫೀಕ್ ಅಹಮದ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸಂಸದರು, ಶಾಸಕರು, ವಿ.ಪ.ಸದಸ್ಯರುಗಳು ಭಾಗವಹಿಸುವರು. ಜಿಲ್ಲಾಡಳಿತ, ಜಿ.ಪಂ., ಆಯುಷ್ ಇಲಾಖೆ, ಎನ್.ಸಿ.ಸಿ. 4 ನೇ ಕರ್ನಾಟಕ ಬೆಟಾಲಿಯನ್, ನೆಹರು ಯುವ ಕೇಂದ್ರ, ಯೋಗ ಗಂಗೋತ್ರಿ, ಪತಂಜಲಿ ಯೋಗ ಶಿಕ್ಷಣ ಸಮಿತಿ, ರಾಜಯೋಗ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ ಇವುಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದೆ.

**Prakruti Products Pvt Ltd**

An Export excellence award winning company is looking for motivated individuals to work in their New Continuous Herbal Extraction Factory at **Vasanthanarasapur** Phase 2, Tumkur.

**REQUIRED**

1) **Operators:** 7 Posts (Shifts, having experience in continuous extraction)
2) **Maintenance Engineer:** 1 Post B.E Electrical
3) **Maintenance Assistant :** 4 Posts having experience of 2 years and qualified ITI/ Diploma
4) **Boiler Operator:** ( with minimum 2 years of experience having certificate)
5) **Office Assistant**
6) **Store Assistant:** with B.Com. Qualification
7) **Quality Control Chemist & Assistant**
8) **Receptionist**

Interested candidate may please send your resume To **hr@prakruti.com** or Call **9448289715** or **Walk in Interview** 11 AM onwards on **22nd of June 2017** at **Plot No 405, KIADB Industrial Area, Vasanthanarasapur,** Phase 2, Tumkur District .

19-06-2017.indd 2 6/19/2017 11:47:08 PM